

ರಾಜಾ ರವಿವರ್ಮನ ಕಲ್ಪನೆಯಲ್ಲಿ ಸಿತಾರ್ ನುಡಿಸುತ್ತಿರುವ ಸಂಗೀತದ ಅಧಿದೇವತೆ ತಾರಾ ದೇವಿ
ಕಲಾಕೃತಿ ಕೃಪೆ: 'ಪರಸರಾಮ್ ಮಂಘಾರಾಮ್' ಪ್ರಕಾಶನದ 'ರಾಜಾ ರವಿವರ್ಮ: ದಿ ಪೈಂಟರ್ ಪ್ರಿನ್ಸ್'




■ ಗೀತಾ ಸೀತಾರಾಮ್

## ರವಿವರ್ಮ

ಕಿಳಿಮಾನೂರಿಗೆ ನಾನೊಬ್ಬನೇ ನನ್ನ ಸಾಮಾನು ಸರಂಜಾಮಿನೊಂದಿಗೆ ಬಂದಿಳಿದಾಗ ಮೊದಲು ಅಚ್ಚರಿಪಟ್ಟಿದ್ದು ಅಮ್ಮ. 'ಅದೇಕೋ? ಪುರತಾರ್ಥಿ ಬರಲಿಲ್ಲವೆ? ಮಕ್ಕಳು ಚೆನ್ನಾಗಿದ್ದಾರಾ? ನೀನಂತೂ ತುಂಬಾ ಸೊರಗಿಹೋಗಿದ್ದೀ, ಊಟ ಸರಿಯಾಗಿ ಮಾಡಲಿಲ್ಲವೆ?' ಕೇಳಿದರು ಅಮ್ಮ.

ನಾನು ಎಲ್ಲಾ ಪ್ರಶ್ನೆಗಳಿಗೂ ಒಂದೊಂದೇ ಪದದ ಉತ್ತರ ಕೊಟ್ಟಾಗ ಅಮ್ಮ ಮಾವನ ಕೋಣೆಗೆ ಹೋಗಿ ಪುಕಾರ ಮಾಡಿದಳು. ಆದರೆ ಮಾವ ಪ್ರತಿಕ್ರಿಯಿಸಲಿಲ್ಲ. ನಾನಂತೂ ನನ್ನ ಹಳೆಯ ಗೆಳೆಯರನ್ನು ಭೇಟಿಯಾಗುತ್ತಾ, ಕುದುರೆ ಸವಾರಿ ಮಾಡುತ್ತಾ, ಆನೆಗಳೊಂದಿಗೆ ನಡೆಯುತ್ತಾ ಆನಂದವಾಗಿದ್ದೆ. ನನ್ನ ಹಳೆಯ ಚಿತ್ರ ರಚಿಸುವ ಕೋಣೆಯನ್ನು ತಂಗಿ ಮಂಗಳ ಸ್ವಚ್ಛಗೊಳಿಸಿ, ಚೌಕಟ್ಟಿಗೆ ಕ್ಯಾನ್ವಾಸ್ ಬಟ್ಟೆ ಏರಿಸಿದ್ದಳು. ಪಕ್ಕದಲ್ಲೇ ಬಣ್ಣಗಳು, ಕುಂಚಗಳು ಸಿದ್ಧ ಮಾಡಲ್ಪಟ್ಟಿದ್ದವು.

ನಾನು ಆನಂದದಿಂದ ನೈಜವೋ ಎಂಬಂಥ ಸುಂದರ ಪುಷ್ಪವೊಂದನ್ನು ಚಿತ್ರಿಸಿದೆ. ಮಂಗಳ ನನ್ನನ್ನು ಊಟಕ್ಕೆ ಕರೆಯಲು ಬಂದವಳು ಹೂವಿನ ಸೌಂದರ್ಯ ನೋಡುತ್ತಾ ತನ್ಮಯಳಾದಳು. ನಾನು ಕೈತೊಳೆದು ಬರುವಷ್ಟರಲ್ಲಿ ದುಂಬಿಯೊಂದು ಚಿತ್ರದ ಮೇಲಿನ ಪುಷ್ಪ ನಿಜವೆಂದು ಭಾವಿಸಿ ಅದರ ಮೇಲೆ ಕುಳಿತಿತ್ತು. ನಾನದನ್ನು ಓಡಿಸಲು ನೋಡಿದಾಗ ಮಂಗಳ ಕಿಸಕ್ಕನೆ ನಕ್ಕಳು. ನಾನು ಕೈತೊಳೆದು ಬರುವಷ್ಟರಲ್ಲಿ ಅದು ಮಂಗಳ ಚಿತ್ರಿಸಿದ ದುಂಬಿಯೆಂದು ಆಗ ಅರಿವಾಯ್ತು ನನಗೆ. ಅವಳ ಪ್ರತಿಭೆಯನ್ನು ಕಂಡು ಭ್ರಮಿಸಿದೆ!

'ಮಾವ ನಿನಗಾಗಿ ಒಂದು ಭಾರೀ ಚಿತ್ರಕಲಾಮಂದಿರ ತಯಾರು ಮಾಡುತ್ತಿದ್ದಾರೆ. ತುಂಬಾ ಗಾಳಿ ಬೆಳಕಿರುವ ಕೊಠಡಿ, ತಿರುವಾಂಕೂರಿನಿಂದ ಕಚ್ಚಾವಸ್ತುಗಳು ಹಾಗೂ ಬಡಗಿಗಳನ್ನು ಕರೆಸಿದ್ದಾರೆ. (ನಿನ್ನಿಷ್ಟದಂತೆ ರೂಪಿಸಿಕೊಳ್ಳಬೇಕಂತೆ) ಮಂಗಳ ಸುದ್ದಿ ಕೊಟ್ಟಳು. ಶುಭದಿನದಂದು ನಾನು ಹೊಸ ಚಿತ್ರರಚನಾ ಕೊಠಡಿಗೆ ಕಾಲಿಟ್ಟೆ.

'ನಿನ್ನ ಮೊದಲ ಚಿತ್ರ ಏನಣ್ಣ?' ಕೇಳಿದಳು ಮಂಗಳ. 'ನಿನ್ನ ಮಗ ಚಂದ್ರನನ್ನು ಕರೆದು ತಾ' ಎಂದೆ.